# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 381 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ ) |
| ಉತ್ತರಿಸುವ ದಿನಾಂಕ | : | 29.01.2026 |
| ಉತ್ತರಿಸುವ ಸಚಿವರು. | : | ಗೃಹ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮೈಸೂರು-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಹಾಗೂ ಇದಕ್ಕೆ ಹೊಂದಿಕೊಂಡಂತೆ ಇರುವ ಸರ್ವೀಸ್ ರಸ್ತೆಯಲ್ಲಿ ಪ್ರಯಾಣಿಕರನ್ನು ತಡೆದು ಸುಲಿಗೆ ಮತ್ತು ದರೋಡೆ ನಡೆಸುತ್ತಿರುವ ಪ್ರಕರಣಗಳು ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮೈಸೂರು-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಹಾಗೂ ಇದಕ್ಕೆ ಹೊಂದಿಕೊಂಡಂತೆ ಇರುವ ಸರ್ವೀಸ್ ರಸ್ತೆಯಲ್ಲಿ ಪ್ರಯಾಣಿಕರನ್ನು ತಡೆದು ಸುಲಿಗೆ ಮತ್ತು ದರೋಡೆ ಮಾಡಿರುವ ಪ್ರಕರಣಗಳು ವರದಿಯಾಗಿರುವುದು ಗಮನಕ್ಕೆ ಬಂದಿರುತ್ತದೆ. |
| ಆ) | ಬಂದಿದ್ದಲ್ಲಿ, ಸಾರ್ವಜನಿಕ ಬಳಕೆಗೆ ಮುಕ್ತಗೊಂಡ ಬಳಿಕ ಮೈಸೂರು-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ/ ಸರ್ವೀಸ್ ರಸ್ತೆಯಲ್ಲಿ ದಾಖಲಾದ ಸುಲಿಗೆ ಮತ್ತು ದರೋಡೆ ಪ್ರಕರಣಗಳು, ಭೇಧಿಸಲಾದ ಪ್ರಕರಣಗಳು ಹಾಗೂ ಬಂಧಿಸಲ್ಪಟ್ಟ ಆರೋಪಿಗಳ ಒಟ್ಟು ಸಂಖ್ಯೆ ಎಷ್ಟು; (ವರ್ಷಾವಾರು, ಜಿಲ್ಲಾ ಘಟಕವಾರು ವಿವರ ನೀಡುವುದು); | ಮೈಸೂರು-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯು ಸಾರ್ವಜನಿಕ ಬಳಕೆಗೆ ಮುಕ್ತಗೊಂಡ ಬಳಿಕ 2022 ರಿಂದ 2026 (ಜನವರಿ)ವರೆಗೆ 23 ಸುಲಿಗೆ ಮತ್ತು 12 ದರೋಡೆ ಪ್ರಕರಣಗಳು ವರದಿಯಾಗಿರುತ್ತದೆ.<br>ವರದಿಯಾಗಿರುವ, ಭೇಧಿಸಲಾಗಿರುವ ಪ್ರಕರಣಗಳ ಸಂಖ್ಯೆ ಮತ್ತು ಬಂಧಿಸಲ್ಪಟ್ಟ ಆರೋಪಿಗಳ ಸಂಖ್ಯೆಯ ವರ್ಷಾವಾರು ಹಾಗೂ ಜಿಲ್ಲಾವಾರು ವಿವರಗಳನ್ನು **ಅನುಬಂಧ -ಎ ರಲ್ಲಿ** ಒದಗಿಸಲಾಗಿದೆ. |
| ಇ) | ಈ ಹೆದ್ದಾರಿ ಹಾಗೂ ಇದಕ್ಕೆ ಹೊಂದಿಕೊಂಡಂತೆ ಇರುವ ಸರ್ವೀಸ್ ರಸ್ತೆಯಲ್ಲಿ ಪ್ರಯಾಣಿಕರಿಗೆ ಸುರಕ್ಷತೆ ಒದಗಿಸಲು ಹಾಗೂ ದರೋಡೆಕೋರರ ಕೃತ್ಯ ತಡೆಯಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು); | ಹೆದ್ದಾರಿಗಳಲ್ಲಿ ಪ್ರಯಾಣಿಕರಿಂದ ಸುಲಿಗೆ ಮತ್ತು ದರೋಡೆ ಮಾಡಿರುವ ಪ್ರಕರಣಗಳಲ್ಲಿ ಕೂಡಲೇ ಪ್ರಕರಣಗಳನ್ನು ಕಾನೂನು ರೀತ್ಯಾ ದಾಖಲಿಸಿಕೊಂಡು ಆರೋಪಿಗಳ ವಿರುದ್ಧ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸುಲಿಗೆ ಮತ್ತು ದರೋಡೆ ಅಪರಾಧಗಳನ್ನು ತಡೆಗಟ್ಟಲು ಸರ್ಕಾರವು ಈ ಕೆಳಗಿನಂತೆ ಕ್ರಮ ಜರುಗಿಸಲಾಗುತ್ತಿದೆ:-<br>➢ ಪೊಲೀಸ್ ಠಾಣಾ ಸರಹದ್ದುಗಳಲ್ಲಿ ಹಾಯ್ದು ಹೋಗುವ ರಾಷ್ಟ್ರೀಯ & ರಾಜ್ಯ ಹೆದ್ದಾರಿಗಳಲ್ಲಿ ನಿಯಮಿತವಾಗಿ 'ಚೆಕ್ ಪೋಸ್ಟ್‌ಗಳನ್ನು ನಿರ್ಮಿಸಿ, ಸಂಶಯಾಸ್ಪದ |

| | | |
|---|---|---|
| | | ವ್ಯಕ್ತಿಗಳನ್ನು ಹಾಗೂ ವಾಹನಗಳನ್ನು ತಪಾಸಣೆ ಮಾಡಲಾಗುತ್ತಿದೆ.<br>➢ ರಾತ್ರಿ ಗಸ್ತು ಕರ್ತವ್ಯಕ್ಕೆ ಪ್ರತಿ ಠಾಣೆಗಳಿಗೆ ಸರ್ಕಾರಿ ದ್ವಿಚಕ್ರ ವಾಹನಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ಅಲ್ಲದೇ ವಾಹನಗಳಿಗೆ ಅಳವಡಿಸಲಾದ ಸೈರನ್ ಹಾಗೂ ರೆಡ್ ಲೈಟ್ ಗಳನ್ನು ಹಚ್ಚಿಕೊಂಡು ರಾತ್ರಿ ಗಸ್ತನ್ನು ಮಾಡಲು ಸೂಚಿಸಲಾಗಿದೆ.<br>➢ ದರೋಡೆ, ಸುಲಿಗೆ ಹಾಗೂ ಇತರೆ ಪ್ರಕರಣಗಳು ನಡೆದ ಬಗ್ಗೆ ದೂರವಾಣಿ ಕರೆಗಳು ಬಂದಲ್ಲಿ ತಕ್ಷಣ ಸ್ಪಂದಿಸಲು 112 ವಾಹನಗಳ ಉಸ್ತುವಾರಿ ಅಧಿಕಾರಿ ಮತ್ತು ಸಿಬ್ಬಂದಿಯವರಿಗೆ ಸೂಚಿಸಲಾಗಿದೆ.<br>➢ ರಾಜ್ಯದ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸುಲಿಗೆ ಮತ್ತು ದರೋಡೆಗಳನ್ನು ತಡೆಗಟ್ಟಲು ದಿನದ 24 ಗಂಟೆಗಳಲ್ಲಿ ಮೂರು ಪಾಳಿಯಲ್ಲಿ Highway patrolling ನಿಯೋಜಿಸಲಾಗಿದೆ.<br>➢ ಈ ಹಿಂದೆ ದರೋಡೆ, ಸುಲಿಗೆ ಹಾಗೂ ಇತರೆ ಸ್ವತ್ತಿನ ಅಪರಾಧವೆಸಗಿದ ಆರೋಪಿತರ ಮೇಲೆ ಎಂ.ಓ.ಬಿ ಕಾರ್ಡ್ ತೆಗೆಯಲಾಗಿರುತ್ತದೆ. ಅವರನ್ನು ಅನಿರೀಕ್ಷಿತವಾಗಿ ಚೆಕ್ ಮಾಡಲಾಗುತ್ತಿದೆ ಹಾಗೂ ಅವರ ಕಾರ್ಯಚಟುವಟಿಕೆಗಳ ಮೇಲೆ ನಿಗಾವಹಿಸಲಾಗಿರುತ್ತದೆ.<br>➢ ಅಪರಾಧಗಳನ್ನು ತಡೆಗಟ್ಟಲು ಬಾರ್ಡರ್ ಕ್ರೈಂ ಮೀಟಿಂಗ್ ಮಾಡಲಾಗುತ್ತಿದೆ.<br>➢ ಸ್ವತ್ತಿನ ಪ್ರಕರಣಗಳಲ್ಲಿ ಭಾಗಿಯಾದ ವ್ಯಕ್ತಿಗಳ ಕುರಿತು ಮಾಹಿತಿಯನ್ನು ನೆರೆ ರಾಜ್ಯ/ಜಿಲ್ಲೆಗಳು/ಪೊಲೀಸ್ ಠಾಣೆಗಳಿಗೆ ಪರಸ್ಪರ ಹಂಚಿಕೊಳ್ಳಲಾಗುತ್ತಿದೆ.<br>➢ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ಹೈವೇ ಪೆಟ್ರೋಲಿಂಗ್ ವಾಹನಗಳನ್ನು ನಿಯಮಿತವಾಗಿ ಗಸ್ತು ಕರ್ತವ್ಯದ ಮೇಲೆ ಇರುವಂತೆ ನೋಡಿಕೊಳ್ಳಲಾಗುತ್ತಿದೆ.<br>➢ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ಬರುವಂತಹ ಟೋಲ್‌ಗಳಲ್ಲಿ ಅಳವಡಿಸಿರುವ ಸಿಸಿಟಿವಿಗಳನ್ನು ಕಾಲ ಕಾಲಕ್ಕೆ ಪರಿಶೀಲನೆ ಮಾಡಲಾಗುತ್ತಿದೆ.<br>➢ ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಸಮುದಾಯ ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸುವ ಹಿತದೃಷ್ಟಿಯಿಂದ ಮನೆ-ಮನೆಗೆ ಪೊಲೀಸ್ ಎಂಬ ಪರಿಕಲ್ಪನೆಯನ್ನು ಅನುಷ್ಠಾನ ಗೊಳಿಸಲಾಗಿರುತ್ತದೆ.<br>➢ ರಾತ್ರಿ ಬೀಟ್ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಯವರು ಕಡ್ಡಾಯವಾಗಿ ಆಯುಧ ಮತ್ತು ಮದ್ದು ಗುಂಡುಗಳನ್ನು ತೆಗೆದುಕೊಂಡು ಹೋಗಲು ಸೂಚಿಸಲಾಗಿದೆ. |

- ಸಂಶಯಾಸ್ಪದ ವ್ಯಕ್ತಿಗಳನ್ನು ಗುರುತಿಸಲು ಪ್ರತಿಯೊಬ್ಬ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರಿಗೆ MCCTNS ಮೊಬೈಲ್ ಅಪ್ಲಿಕೇಶನ್ ಬಳಸಲು ಸೂಚಿಸಲಾಗಿರುತ್ತದೆ.
- ನಾಕಾಬಂದಿಗಳನ್ನು ಏರ್ಪಡಿಸಿ ಅನುಮಾನಾಸ್ಪದ ವ್ಯಕ್ತಿಗಳು ಮತ್ತು ವಾಹನಗಳನ್ನು ಪರಿಶೀಲಿಸಿ ಅನುಮಾನಾಸ್ಪದ ಹಾಗೂ ಒಂಟಿಯಾಗಿ ರಾತ್ರಿ ವೇಳೆಯಲ್ಲಿ ತಿರುಗಾಡುವ ವ್ಯಕ್ತಿಗಳ ಬೆರಳು ಮುದ್ರೆಗಳನ್ನು ಸಂಗ್ರಹಿಸಿ ಎಂ.ಓ ಆಸಾಮಿಗಳೆ ಅಲ್ಲವೇ ಎಂಬ ಬಗ್ಗೆ ಪರಿಶೀಲಿಸಿ, ಬೆರಳು ಮುದ್ರೆ ಹೋಲಿಕೆ ಆದಂತಹವರನ್ನು ವಶಕ್ಕೆ ಪಡೆದು ಕಾನೂನು ರೀತಿ ಕ್ರಮ ಕೈಗೊಳ್ಳಲಾಗುತ್ತಿದೆ.
- ಪೊಲೀಸ್ ಪ್ರಧಾನ ಕಛೇರಿಯಿಂದ ಸುಲಿಗೆ ಮತ್ತು ದರೋಡೆಗಳನ್ನು ನಿಯಂತ್ರಿಸುವ ಕುರಿತಂತೆ ರಾಜ್ಯದ ಎಲ್ಲಾ ಘಟಕಾಧಿಕಾರಿಗಳಿಗೆ ಅಗತ್ಯ ಸೂಚನೆಗಳನ್ನು ಸುತ್ತೋಲೆಯ ಮೂಲಕ ನೀಡಲಾಗಿರುತ್ತದೆ.
- ಕ್ರೈಮ್ ಅಂಡ್ ಕ್ರಿಮಿನಲ್ ಟ್ರ್ಯಾಕಿಂಗ್ ನೆಟ್ ವರ್ಕ್ & ಸಿಸ್ಟಮ್ಸ್ (CCTNS): ಇದು ದೇಶಾದ್ಯಂತ ಎಲ್ಲಾ ಪೊಲೀಸ್ ಠಾಣೆಗಳನ್ನು ಸಂಪರ್ಕಿಸುವ ಕೇಂದ್ರೀಕೃತ ಆನ್‌ಲೈನ್ ವೇದಿಕೆಯಾಗಿದೆ. ಇದು ಎಫ್‌ಐಆರ್ (FIR), ಚಾರ್ಜ್‌ಶೀಟ್, ಮತ್ತು ತನಿಖಾ ವರದಿಗಳನ್ನು ದಾಖಲಿಸಲು ಹಾಗೂ ಅಂತರ-ರಾಜ್ಯ ಅಪರಾಧಿಗಳ ಮಾಹಿತಿಯನ್ನು ಹಂಚಿಕೊಳ್ಳಲಾಗುತ್ತಿದೆ.
- ರಾಷ್ಟ್ರೀಯ ಸ್ವಯಂಚಾಲಿತ ಫಿಂಗರ್‌ಪ್ರಿಂಟ್ ಗುರುತಿನ ವ್ಯವಸ್ಥೆಯಲ್ಲಿ (NAFIS) ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ (NCRB) ನಿರ್ವಹಿಸುತ್ತಿರುವ NAFIS ರಲ್ಲಿ ಅಪರಾಧ ಚಟುವಟಿಕೆಗಳಿಗೆ ಸಂಬಂಧಿಸಿದ ಬೆರಳಚ್ಚುಗಳನ್ನು ಹುಡುಕಿ ಅಪರಾಧಿಗಳನ್ನು ಪತ್ತೆ ಹಚ್ಚಲು ಕ್ರಮ ಕೈಗೊಳ್ಳಲಾಗುತ್ತದೆ.
- ಈ ಹಿಂದೆ ದಾಖಲಾಗಿರುವ ರಾಬರಿ ಹಾಗೂ ಡಕಾಯಿತಿ ಪ್ರಕರಣಗಳಲ್ಲಿ ದಸ್ತಗಿರಿಯಾಗಿ ನ್ಯಾಯಾಲಯದಿಂದ ಜಾಮೀನು ಪಡೆದು ಹಾಜರಾಗದೆ ತಲೆಮರೆಸಿಕೊಂಡಿರುವ ಆರೋಪಿಗಳ ವಿರುದ್ಧ ನ್ಯಾಯಾಲಯ ಹೊರಡಿಸಿರುವ ವಾರೆಂಟ್‌ಗಳನ್ನು ಜಾರಿಗೊಳಿಸುವ ಸಲುವಾಗಿ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.
- ಕಾರಾಗೃಹದಿಂದ ಬಿಡುಗಡೆಯಾಗುವ ರಾಬರಿ, ಡಕಾಯಿತಿ ಹಾಗೂ ಇತರ ಸ್ವತ್ತು ಕಳ್ಳತನ ಪ್ರಕರಣಗಳ ಆರೋಪಿಗಳ ಮೇಲೆ

| | | |
|---|---|---|
| | | ಕಟ್ಟುನಿಟ್ಟಿನ ನಿಗಾವಹಿಸಲಾಗುತ್ತಿದ್ದು, ರಾಬರಿ ಮತ್ತು ಡಕಾಯಿತಿ ಪ್ರಕರಣಗಳನ್ನು ನಿಗ್ರಹಿಸುವ ಉದ್ದೇಶದಿಂದ ಅಗತ್ಯ ಕ್ರಮಗಳನ್ನು ಜರುಗಿಸಲಾಗುತ್ತಿದೆ.<br>➢ ಸ್ವತ್ತು ಅಪರಾಧಗಳಿಗೆ ಸಂಬಂಧಿಸಿದ ಘೋರ ಪ್ರಕರಣಗಳಲ್ಲಿ ಭಾಗವಹಿಸಿರುವ ಆರೋಪಿಗಳ ಚರಿತ್ರೆ ಹಾಳೆಗಳನ್ನು ಪರಿಶೀಲಿಸಲಾಗುತ್ತಿದ್ದು, ಸಂಘಟಿತ ಅಪರಾಧ ಕೃತ್ಯ ಕಂಡುಬಂದಲ್ಲಿ ಸೂಕ್ತ ಕಾಯ್ದೆ ಹಾಗೂ ಕಲಂಗಳ ಅಡಿಯಲ್ಲಿ ತನಿಖೆ ನಡೆಸಿ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಲಾಗುತ್ತಿದೆ.<br>➢ ಕೇಂದ್ರ ಗೃಹ ಮಂತ್ರಾಲಯ ಅಭಿವೃದ್ಧಿಪಡಿಸಿರುವ CRI-MAC ಪೋರ್ಟಲ್ ಬಳಸಿ ರಾಬರಿ, ಡಕಾಯಿತಿ ಮತ್ತು ಸಂಘಟಿತ ಅಪರಾಧಗಳಲ್ಲಿ ತೊಡಗಿರುವ ಆರೋಪಿಗಳ ವಿವರಗಳನ್ನು ಇತರೆ ರಾಜ್ಯಗಳ ಪೊಲೀಸ್ ಇಲಾಖೆಗಳೊಂದಿಗೆ ತಕ್ಷಣ ಹಂಚಿಕೊಳ್ಳಲಾಗುತ್ತಿದೆ.<br>➢ ಅಪರಾಧಿಗಳ ಕಾರ್ಯವಿಧಾನ (MO), ಬಳಸುವ ಮಾರ್ಗಗಳು, ಗ್ಯಾಂಗ್ ಸಂಪರ್ಕಗಳು ಇತ್ಯಾದಿಗಳನ್ನು ಹೋಲಿಕೆ ಮಾಡಿ ಅಪರಾಧ ಮಾದರಿಯನ್ನು ಗುರುತಿಸಲಾಗುತ್ತಿದೆ.<br>➢ ಜಾಮೀನಿನ ಮೇಲೆ ಬಿಡುಗಡೆಗೊಂಡು ಪರಾರಿಯಾಗಿರುವ ಅಥವಾ ವಾರೆಂಟ್ ಇರುವ ಆರೋಪಿಗಳ ಬಗ್ಗೆ ಇತರೆ ರಾಜ್ಯಗಳಿಂದ ಮಾಹಿತಿ ಪಡೆದು ಬಂಧನಕ್ಕೆ ಕ್ರಮ ಜರುಗಿಸಲಾಗುತ್ತಿದೆ.<br>➢ ಮರುಕೃತ್ಯ ಮಾಡುವ (repeat offenders) ಹಾಗೂ ಅಂತರರಾಜ್ಯ ಗ್ಯಾಂಗ್‌ಗಳ ಮೇಲೆ ಮುನ್ನೆಚ್ಚರಿಕಾ ನಿಗಾ ವಹಿಸಿ ಅಪರಾಧ ಸಂಭವಿಸುವ ಮೊದಲು ಅಪರಾಧ ತಡೆಗಟ್ಟುವ ಕ್ರಮ ಕೈಗೊಳ್ಳಲಾಗುತ್ತಿದೆ. |
| ಈ) | ಮೈಸೂರು-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ವಿವಿಧ ಸಂಚಾರಿ ನಿಯಮಗಳನ್ನು ಉಲ್ಲಂಘಿಸಿದಕ್ಕಾಗಿ ITMS Cameraಗಳ ಮೂಲಕ ದಾಖಲಿಸಲ್ಪಟ್ಟ ಹಾಗೂ ಮುಕ್ತಾಯಗೊಳಿಸಲ್ಪಟ್ಟ ಒಟ್ಟು ಪ್ರಕರಣಗಳ ಸಂಖ್ಯೆ ಎಷ್ಟು; ಈ ಪ್ರಕರಣಗಳ ಸಂಬಂಧ ವಿಧಿಸಲಾದ, ಸಂಗ್ರಹಿಸಲಾದ ಮತ್ತು ಸಂಗ್ರಿಹಿಸಲು ಬಾಕಿ ಇರುವ ದಂಡದ ಮೊತ್ತ ಎಷ್ಟು, (ವರ್ಷವಾರು ಮಾಹಿತಿ ನೀಡುವುದು); | ಮೈಸೂರು-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ವಿವಿಧ ಸಂಚಾರಿ ನಿಯಮಗಳನ್ನು ಉಲ್ಲಂಘಿಸಿದಕ್ಕಾಗಿ ITMS Cameraಗಳ ಮೂಲಕ ದಾಖಲಿಸಲ್ಪಟ್ಟ, ಮುಕ್ತಾಯಗೊಳಿಸಲ್ಪಟ್ಟ ಒಟ್ಟು ಪ್ರಕರಣಗಳ ಸಂಖ್ಯೆ, ಈ ಪ್ರಕರಣಗಳಲ್ಲಿ ವಿಧಿಸಲಾದ, ಸಂಗ್ರಹಿಸಲಾದ ಮತ್ತು ಸಂಗ್ರಿಹಿಸಲು ಬಾಕಿ ಇರುವ ದಂಡದ ಮೊತ್ತಗಳ ವರ್ಷವಾರು ಮಾಹಿತಿಯನ್ನು **ಅನುಬಂಧ-ಬಿ** ರಲ್ಲಿ ಒದಗಿಸಲಾಗಿದೆ. |

| | | |
|---|---|---|
| ಉ) | ಈ ಹೆದ್ದಾರಿಯಲ್ಲಿ ಅಳವಡಿಸಲಾದ ITMS Cameraಗಳ ಒಟ್ಟು ಸಂಖ್ಯೆ ಎಷ್ಟು; ಎಲ್ಲೆಲ್ಲಿ ಅಳವಡಿಸಲಾಗಿದೆ; ಇವುಗಳ ವಿಶೇಷತೆ ಏನು? (ವಿವರ ನೀಡುವುದು) | ಮೈಸೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಅಳವಡಿಸಲಾದ ITMS Cameraಗಳ ಒಟ್ಟು ಸಂಖ್ಯೆ ಮತ್ತು ಎಲ್ಲೆಲ್ಲಿ ಅಳವಡಿಸಲಾಗಿದೆ ಎಂಬ ಮಾಹಿತಿಯನ್ನು **ಅನುಬಂಧ-ಸಿ** ರಲ್ಲಿ ಒದಗಿಲಾಗಿದೆ.<br><br>ಮೈಸೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರಿ ನಿಯಮಗಳನ್ನು ಉಲ್ಲಂಘನೆಯನ್ನು ಸೆರೆಹಿಡಿಯಲು ಅಳವಡಿಸಿರುವ ITMS Cameraಗಳ ವಿಶೇಷತೆಗಳು ಈ ಕೆಳಕಂಡಂತಿದೆ:-<br><br>➢ ಸದರಿ ಕ್ಯಾಮೆರಾಗಳು ಈ ಕೆಳಕಂಡ ಸಂಚಾರ ನಿಯಮ ಉಲ್ಲಂಘನಾ ಪ್ರಕರಣಗಳನ್ನು ದಾಖಲಿಸುತ್ತದೆ:<br>• Automatic Number Plate Detection<br>• Over Speeding<br>• Wrong way<br>• No Entry<br>• Not wearing seat belt<br>• Lane discipline violation<br><br>➢ ಸದರಿ ಕ್ಯಾಮೆರಾಗಳು ರಾಷ್ಟ್ರೀಯ ಹೆದ್ದಾರಿ 275 ರಲ್ಲಿ ಸಂಚರಿಸುವ ವಾಹನಗಳು ಉಲ್ಲಂಘಿಸುವ ಸಂಚಾರ ನಿಯಮಗಳನ್ನು ಸ್ವಯಂ ಚಾಲಿತವಾಗಿ ಸೆರೆ ಹಿಡಿದು ಸಂಬಂಧಪಟ್ಟ ಮಾಲೀಕರ ಮೊಬೈಲ್ ನಂಬರ್‌ಗಳಿಗೆ ದಂಡ ಹಾಗೂ ಉಲ್ಲಂಘನೆ ಮಾಹಿತಿಯನ್ನು ಎಸ್ ಎಂಎಸ್ ಮೂಲಕ ರವಾನೆ ಮಾಡುತ್ತದೆ.<br><br>➢ ಸಂಚಾರ ನಿಯಮಗಳನ್ನು ಉಲ್ಲಂಘನೆ ಮಾಡಿರುವ ವಾಹನ ಸಂಖ್ಯೆ, ವಾಹನದ ಚಿತ್ರದೊಂದಿಗೆ, ಸ್ಥಳ, ಸಮಯದ ಮಾಹಿತಿಯನ್ನು ಸಂಗ್ರಹಿಸಿಕೊಳ್ಳುತ್ತವೆ.<br><br>➢ ಸದರಿ ಕ್ಯಾಮೆರಾಗಳು ವಾಹನ ಚಾಲಕರು ಉಲ್ಲಂಘಿಸುವ ಸಂಚಾರ ನಿಯಮಗಳನ್ನು ಸಂಬಂಧಪಟ್ಟ ಉಲ್ಲಂಘನೆಗಳೊಂದಿಗೆ ವರ್ಗೀಕರಿಸಿ ಮಾಹಿತಿಯನ್ನು ನೀಡುತ್ತದೆ. |

HD 19 PCQ 2026

**(ಡಾ: ಜಿ.ಪರಮೇಶ್ವರ)**
ಗೃಹ ಸಚಿವರು

# ಅನುಬಂಧ-ಎ

## ಸುಲಿಗೆ ಪ್ರಕರಣಗಳು

| ಘಟಕದ ಹೆಸರು | ಮೈಸೂರು-ಬೆಂಗಳೂರು ಹೆದ್ದಾರಿಯಲ್ಲಿ ವರದಿಯಾದ ಪ್ರಕರಣಗಳ ಸಂಖ್ಯೆ | | | | | ಪತ್ತೆ ಹಚ್ಚಲಾದ ಪ್ರಕರಣಗಳ ಸಂಖ್ಯೆ | | | | | ಬಂಧಿಸಲ್ಪಟ್ಟ ಆರೋಪಿಗಳ ಸಂಖ್ಯೆ | | | | |
|---|---|---|---|---|---|---|---|---|---|---|---|---|---|---|---|
| | 2022 | 2023 | 2024 | 2025 | 2026 | 2022 | 2023 | 2024 | 2025 | 2026 | 2022 | 2023 | 2024 | 2025 | 2026 |
| ಬೆಂಗಳೂರು ನಗರ | 0 | 0 | 0 | 0 | | 0 | 0 | 0 | | | 0 | 0 | 0 | 0 | |
| ಬೆಂಗಳೂರು ಜಿಲ್ಲೆ | 0 | 0 | 0 | 0 | | 0 | 0 | 0 | 0 | | 0 | 0 | 0 | 0 | |
| ಬೆಂಗಳೂರು ದಕ್ಷಿಣ ಜಿಲ್ಲೆ | 2 | 2 | 2 | 6 | | 2 | 2 | 2 | 6 | | 2 | 6 | 4 | 9 | |
| ಮಂಡ್ಯ | 0 | 6 | 2 | 1 | | 0 | 3 | 0 | 1 | | 0 | 7 | 0 | 3 | |
| ಮೈಸೂರು ನಗರ | 1 | 0 | 0 | 0 | | 1 | 0 | 0 | 0 | | 3 | 0 | 0 | 0 | |
| ಮೈಸೂರು ಜಿಲ್ಲೆ | 0 | 0 | 0 | 0 | | 0 | 0 | 0 | 0 | | 0 | 0 | 0 | 0 | |
| ರೈಲ್ವೇಸ್ | 0 | 0 | 0 | 0 | | 0 | 0 | 0 | 0 | | 0 | 0 | 0 | 0 | |

## ದರೋಡೆ ಪ್ರಕರಣಗಳು

| ಘಟಕದ ಹೆಸರು | ಮೈಸೂರು-ಬೆಂಗಳೂರು ಹೆದ್ದಾರಿಯಲ್ಲಿ ವರದಿಯಾದ ಪ್ರಕರಣಗಳ ಸಂಖ್ಯೆ | | | | | ಪತ್ತೆ ಹಚ್ಚಲಾದ ಪ್ರಕರಣಗಳ ಸಂಖ್ಯೆ | | | | | ಬಂಧಿಸಲ್ಪಟ್ಟ ಆರೋಪಿಗಳ ಸಂಖ್ಯೆ | | | | |
|---|---|---|---|---|---|---|---|---|---|---|---|---|---|---|---|
| | 2022 | 2023 | 2024 | 2025 | 2026 | 2022 | 2023 | 2024 | 2025 | | 2022 | 2023 | 2024 | 2025 | 2026 |
| ಬೆಂಗಳೂರು ನಗರ | 0 | 0 | 0 | 0 | | 0 | 0 | 0 | 0 | | 0 | 0 | 0 | 0 | |
| ಬೆಂಗಳೂರು ಜಿಲ್ಲೆ | 0 | 0 | 0 | 0 | | 0 | 0 | 0 | 0 | | 0 | 0 | 0 | 0 | |
| ಬೆಂಗಳೂರು ದಕ್ಷಿಣ ಜಿಲ್ಲೆ | 3 | 3 | 1 | 0 | | 3 | 3 | 1 | 0 | | 15 | 13 | 2 | 0 | |
| ಮಂಡ್ಯ | 0 | 4 | 0 | 1 | | 0 | 3 | 0 | 1 | | 0 | 21 | 0 | 5 | |
| ಮೈಸೂರು ನಗರ | 0 | 0 | 0 | 0 | | 0 | 0 | 0 | 0 | | 0 | 0 | 0 | 0 | |
| ಮೈಸೂರು ಜಿಲ್ಲೆ | 0 | 0 | 0 | 0 | | 0 | 0 | 0 | 0 | | 0 | 0 | 0 | 0 | |
| ರೈಲ್ವೇಸ್ | 0 | 0 | 0 | 0 | | 0 | 0 | 0 | 0 | | 0 | 0 | 0 | 0 | |

## ಅನುಬಂಧ -ಬಿ

| ವರ್ಷ | ದಾಖಲಾಗಿರುವ ಒಟ್ಟು ಪ್ರಕರಣಗಳು | ವಿಧಿಸಿರುವ ದಂಡ ಮೊತ್ತ ರೂ. | ಸಂಗ್ರಹವಾದ ದಂಡ ಮೊತ್ತ ರೂ | ಬಾಕಿ ಇರುವ ದಂಡ ಮೊತ್ತ ರೂ. |
|---|---|---|---|---|
| 2024 | 13,83,861 | 93,75,42,500 | 8,38,80,500 | 85,36,62,000 |
| 2025 | 5,43,175 | 40,10,76,500 | 4,30,73,000 | 35,80,03,500 |

## ಅನುಬಂಧ- ಸಿ

ಮೈಸೂರು ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಒಟ್ಟು **25 ಸಂಖ್ಯೆಯ** ಕ್ಯಾಮರಾಗಳನ್ನು ಅಳವಡಿಸಲಾಗಿರುತ್ತದೆ.

**ಸ್ಥಳಗಳ ವಿವರ:**

### 01. ಬೆಂಗಳೂರು ದಕ್ಷಿಣ ಜಿಲ್ಲೆ (ರಾಮನಗರ)

| SL. NO | PLACE |
|---|---|
| 01. | Ketaganahalli Road, Bidadi PS limits 1st Location towards Bengaluru. |
| 02. | Near Hulthar State Forest Ramanagara Traffic PS 2nd Location Towards Mysore. |
| 03. | Bilagumba, Ramanagara Traffic PS 3rd Location Towards Bengaluru. |
| 04. | Mudageri Gate, Channapatna Traffic PS 4th Location towards Mysore. |
| 05. | Sri Chamundeshwari Hospital Channapatna Traffic PS 5th Location towards Bengaluru. |

### 02. ಮಂಡ್ಯ ಜಿಲ್ಲೆ.

| SL. NO | PLACE |
|---|---|
| 01. | Madanayakanahalli (Mandya) 1st Location towards Bengaluru. |
| 02. | Gejjalagere KMF (Mandya) 2nd Location towards Mysore. |
| 03. | Induvalu (Mandya) 3rd Location Towards Mysore. |
| 04. | Srinivasa Agrahara (Kallikoppal) (Mandya) 4th Location towards Bengaluru. |
| 05. | Brahmapura (Mandya) 5th Location towards Mysore. |

### 03. ಮೈಸೂರು ನಗರ.

| SL. NO | PLACE |
|---|---|
| 01. | Siddalingpura towards Bengaluru. |
| 02. | Siddalingpura towards Mysore. |
| 03. | Kempegowda circle towards Mysore city. |
| 04. | Kempegowda circle towards Unnathinagara. |
| 05. | Kempegowda circle towards PushpashramaJn. |